ಶ್ರೀ ಬಿ. ಡಿ. ಜತ್ತಿ.—ಆಹಾರ ಧಾನ್ಯವನ್ನು ಅಲ್ಪಸ್ವಲ್ಪ ತರೆಮೇರೆ ಹೊತ್ತುಕೊಂಡು ಹೋಗಿದ್ದಾರೆ, ಅದು ಹೆಚ್ಚು ಇಲ್ಲ.

ಶ್ರೀ ಕೆ. ಲಕ್ಕಪ್ಪ.—ರೈತನು ತನ್ನ ಸಂಸಾರಕ್ಕೆ ಆಗುವಷ್ಟು ಅಲ್ಲದೆ ಹೆಚ್ಚಾಗಿ ಭತ್ತವನ್ನು ಬೆಳೆದಿದ್ದರೆ ಮಾತ್ರ ವಸೂಲು ಕ್ರಮ ಮಾಡಬೇಕೆಂದು ಆದೇಶ ಕೊಟ್ಟಿದ್ದೀರೋ ಅಥವಾ ಕಡಿಮೆ ಬೆಳೆದಿದ್ದರೂ ವಸೂಲು ಮಾಡಬೇಕೆಂದು ಅಧಿಕಾರಿಗಳಿಗೆ ಆದೇಶ ಕೊಟ್ಟಿದ್ದೀರೋ, ಅಪ್ಪಣೆ ಕೊಡಿಸಿ?

Mr. SPEAKER.—This deals only with price structure.

ಶ್ರೀ ಕೆ. ಲಕ್ಕಪ್ಪ.—'ಬಿ'ಗೆ ಕೊಟ್ಟಿರುವ ಉತ್ತರವನ್ನು ನೋಡಿದರೆ ನಾನು ಹಾಕಿದ ಪ್ರಶ್ನೆಯಲ್ಲಿ ರೆಲವೆನ್ಸ್ ಇದೆ.

Mr. SPEAKER.—I am sorry.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪ್ರೊಡ್ಯೂಸರ್ಸ್ ಪ್ರೈಸ್ ಪರ್ ಕ್ವಿಂಟಾಲ್ 45 ಎಂದು ಹೇಳುತ್ತೀರಿ, ರೀಟೇಲ್ 97 ಎಂದು ಹೇಳುತ್ತೀರಿ, ಏಕೆ ಇಷ್ಟು ದೊಡ್ಡ ಅಂತರವಿದೆ ?

Sri B. D. JATTI.—The figure Rs. 45 is per quintal of paddy. Rs. 94.25 is wholesole price; per quintal of rice Rs. 97 is retail price per quintal of rice.

ಶ್ರೀ ಬಿ. ಭಾನ್ಕರಶೆಟ್ಟಿ.—ನಮ್ಮ ಜಿಲ್ಲೆಯ ಬತ್ತ ಉತ್ತಮ ತರಗತಿಯದಾಗಿದ್ದು ಸಹ ಕೇವಲ ಮೂವತ್ತೆಂಟೂವರೆ ರೂಪಾಯಿ ಬೆಲೆಯನ್ನು ಗೊತ್ತುಮಾಡಿದ್ದೀರಿ, ಇದು ಉತ್ತಮ ದರ್ಜೆಯದ್ದು ಇದೆ ಎಂದು ತೀರ್ಮಾನಿಸುವುದಕ್ಕೆ ಆಗುವುದಿಲ್ಲವೇ ?

ಶ್ರೀ ಬಿ. ಡಿ. ಜತ್ತಿ.—ವಕ್ಕಲಿಗರಲ್ಲಿರುವ ತಜ್ಞರನ್ನು ಕೇಳಿ ಮಾಡಿದ್ದೇವೆ. ತಾವು ಹೇಳಿದಂತೆ ಮಾಡಬೇಕೆಂದರೆ ಮಾಡುವುದಕ್ಕಾಗುವುದಿಲ್ಲ.

Distribution of Loans through Land Development Bank.

*Q.—207. Sri B. J. LINGE GOWDA (Channapatna).—

Will the Government be pleased to state :—

(*a*) the action taken for the distribution of loans through the Land Development Bank, Channapatna, for sinking of wells;

(*b*) the total allotment made to Channapatna Taluk in this behalf ?

*A.—Sri K. PUTTASWAMY (Minister for Co-operation and Housing).—

(*a*) All arrangements are made to sanction loans immediately the loan applications are received from the Deputy Commissioner.

(*b*) Rs. 1,50,000 to 30 wells.

ಶ್ರೀ ಬಿ. ಜೆ. ಲಿಂಗೇಗೌಡ.—ತಾವು ನನ್ನ ಮೊದಲನೇ ಪ್ರಶ್ನೆಗೆ ಉತ್ತರವಾಗಿ ಜಿಲ್ಲಾಧಿಕಾರಿಗಳಿಂದ ಸಾಲವ ಅರ್ಜಿಗಳು ಬಂದಕೂಡಲೇ ಸಾಲಗಳನ್ನು ವಿಂಜೂರು ಮಾಡುವ ಬಗ್ಗೆ ಎಲ್ಲಾ ವ್ಯವಸ್ಥೆಗಳನ್ನೂ ಮಾಡಲಾಗಿದೆಯೆಂದು ಹೇಳಿದ್ದೀರಿ. ಸರ್ಕಾರದವರು ಭೂ ಅಭಿವೃದ್ಧಿ ಬ್ಯಾಂಕ್‌ಗಳ ಮೂಲಕ ಸಾಲಗಳನ್ನು ಏರ್ಪಾಡು ಮಾಡುವ ಆರ್ಡರನ್ನು ಯಾವಾಗ ಹೊರಡಿಸಿದರು ? ಜಿಲ್ಲಾಧಿಕಾರಿಗಳು ಬ್ಯಾಂಕ್‌ಗೆ ಯಾವಾಗ ಅರ್ಜಿಗಳನ್ನು ಕಳಿಸಿದರು ? ಇದುವರೆಗೆ ಬಂದ ಅರ್ಜಿಗಳ ಪೈಕಿ ಎಂಥಾದರೂ ಮಂಜೂರಾಗಿದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಸರ್ಕಾರದ ಹುಕುಮ್ ನವೆಂಬರ್ ಎರಡನೇ ತಾರೀಕಿನ ಗೆಜೆಟ್‌ನಲ್ಲಿ ಎಂದಿದೆ. ಈಚೆಗೆ ಜಿಲ್ಲಾಧಿಕಾರಿಗಳು 30 ಹೆಸರುಗಳನ್ನು ಕಳಿಸಿಕೊಟ್ಟಿದ್ದಾರೆ. ಜಿಲ್ಲಾಧಿಕಾರಿಗಳು ಹೆಸರುಗಳನ್ನು ಕಳಿಸಿಕೊಟ್ಟಕೂಡಲೆ ಸಾಲಗಳನ್ನು ಕೊಡುವುದಕ್ಕಾಗುವುದಿಲ್ಲ. ಅವರುಗಳು ರ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನ ಮೆಂಬರ್‌ಗಳಾಗಬೇಕು. ಈಗ 21 ಜನರು ಮೆಂಬರ್ ಗಳಾಗಿದ್ದಾರೆ. 14 ಜನರ ಅಪ್ಲಿಕೇಷನ್‌ಗಳು ಸಂಪೂರ್ಣವಾಗಿ, ಅವರ ಭಾಗದ ಸಾಲಗಳನ್ನು ಪೂರೈಸಿದ್ದೇವೆ. 13 ಅಪ್ಲಿಕೇಷನ್‌ಗಳ ಬಗ್ಗೆ 52 ಸಾವಿರ ರೂಪಾಯಿಗಳು ಮಂಜೂರಾಗಿದೆ. ಮತ್ತು 6 ಜನಕ್ಕೆ ಮೊದಲನೇ ಕಂತನ್ನು ಕೊಟ್ಟಿದೆ.

ಶ್ರೀ ಬಿ. ಜೆ. ಲಿಂಗೇಗೌಡ.—ಜಿಲ್ಲಾಧಿಕಾರಿಗಳು ಬ್ಯಾಂಕ್‌ಗೆ ಯಾವಾಗ ಅರ್ಜಿಗಳನ್ನು ಕಳಿಸಿದ್ದಾರೆ ಎಂದು ಕೇಳಿದೆ, ಅದಕ್ಕೆ ಉತ್ತರ ಹೇಳಲಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಬಹುಶಃ ಹೋದ ತಿಂಗಳು ಕಳಿಸಿಕೊಟ್ಟಿರಬಹುದು.

ಶ್ರೀ ಎಂ. ಸಿ. ಬನಪ್ಪ.—ಭೂ ಅಭಿವೃದ್ಧಿ ಬ್ಯಾಂಕ್‌ಗೆ ಸಾಲ ಕೊಡುವ ಅಧಿಕಾರವಿರಬೇಕು, ಜಿಲ್ಲಾಧಿಕಾರಿಗಳಿಗೆ ಕಳಿಸಿಕೊಡುವ ಅಧಿಕಾರ ಕೊಟ್ಟರೆ ಬಹಳ ತಡವಾಗಬಹುದೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಮೊದಲನೇ ಸಾರಿ ಜಿಲ್ಲಾಧಿಕಾರಿಗಳಿಗೆ ಕಳಿಸಿಕೊಡಲು ಕಾರಣ ವೇನೆಂದರೆ, ಮೊದಲು ಅರ್ಜಿದಾರರು ಅರ್ಜಿಗಳನ್ನು ಜಿಲ್ಲಾಧಿಕಾರಿಗಳಿಗೆ ಕಳಿಸಿಕೊಟ್ಟಿದ್ದರು. ಈ ಒಂದು ಯೋಜನೆಯನ್ನು ಜಮೀನು ಅಭಿವೃದ್ಧಿ ಬ್ಯಾಂಕ್‌ಗೆ ವಹಿಸಿದಮೇಲೆ, ಜಿಲ್ಲಾಧಿಕಾರಿಯವರ ರೆವಿನ್ಯೂ ಖಾತೆಯಲ್ಲಿ ಕೆಲವು ಉಳಿದಿದ್ದವು. ಮೊದಲನೇ ಸಾರಿ ಜಿಲ್ಲಾಧಿಕಾರಿಯವರಿಗೆ ಅರ್ಜಿಗಳು ಹೋಗದಿದ್ದರೆ ಅರ್ಜಿದಾರರಿಗೆ ಹಣ ಕೊಡುವುದಕ್ಕೇ ತಪ್ಪಿಹೋಗುತ್ತದೆ ಎನ್ನುವ ದೃಷ್ಟಿಯಿಂದ ಮೊದಲನೇ ಬಾರಿಗೆ ಅರ್ಜಿಗಳನ್ನು ಕಳಿಸಿಕೊಡಿ ಎಂದು ಹೇಳಿತ್ತು. ಅದರ ಪ್ರಕಾರ 30 ಅರ್ಜಿ ಗಳನ್ನು ಕಳಿಸಿದ್ದರು. ಅವುಗಳಮೇರೆ ಕ್ರಮ ಜರುಗಿಸಿದ್ದೇವೆ.

Sri N. O. SAMAJI.—(*Marathi*)

ಶ್ರೀ ಕೆ. ಪುಟ್ಟಸ್ವಾಮಿ.—ಅದು ಆಗುವುದಿಲ್ಲ. ಅದಕ್ಕೆ ಬೇಕಾದಂಥ ದಾಖಲಾತಿಗಳನ್ನು ಆಫೀಸಿನಲ್ಲಿ ನೋಡಬೇಕು. ರೆವೆನ್ಯೂ ಡಿಪಾರ್ಟ್‌ಮೆಂಟಿನವರು ಹಣ ಕೊಟ್ಟರೂ ಕೊಡಬಹುದು, ಇಲ್ಲದಿದ್ದರೆ ರ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನ ಷೇರ್ ಬಗ್ಗೆ ಕೊಡುವ ಹಣ ಅವರದೇ ಇರುತ್ತದೆ.

ಶ್ರೀ ಟಿ. ಮಾದಯ್ಯಗೌಡ.—ಅರ್ಜಿದಾರರಿಂದ ಬಂದಂಥ ಅರ್ಜಿಗಳನ್ನು ಕ್ರಮವಾಗಿ ಬಿಲ್ಡ್ ಅಪ್ ಮಾಡತಕ್ಕ ಜವಾಬ್ದಾರಿ ರ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕನವರದ್ದು. ಅವರು ಬಿಲ್ಡ್ ಅಪ್ ಮಾಡಿ ಡೆಪ್ಯುಟಿ ಕಮೀಷನರಿಗೆ ಕಳುಹಿಸುತ್ತಾರೆ. ಆಮೇಲೆ ಹಾಗೆ ಎನ್.ಇ.ಎಸ್. ನವರು ಮಾಡುತ್ತಾ ಇದ್ದಾರೆ. ಸರಿಯಾಗಿ ಪಾವತಿ ಆಗತಕ್ಕ ಹಣದ ಜವಾಬ್ದಾರಿ ಅಂದರೆ, ಕೊನೆಯ ಜವಾಬ್ದಾರಿ ಯಾರಿಗೆ ಇದೆ ?

ಶ್ರೀ ಕೆ. ಪುಟ್ಟಸ್ವಾಮಿ.—ಅದು ರ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನದು.

Sri K. LAKKAPPA.—I rise to a point of order because the Hon'ble Minister has said that the Member should only put a question in the language in which the Hon'ble Minister should understand. We also insisted that the Hon'ble Minister should also reply in the language in which the Members put the question. There is a lot of controversy in this matter in regard to procedure. This is left to the discretion of the Speaker. I request you to give a ruling on the point.

Mr. SPEAKER.—We have spent 45 minutes out of one hour. I have no objection to hear this point of order. The other questions will lapse. The Members may kindly support his point of order if they like. I am saying this particularly because the House will remember that this Member had made a charge against the chair that I am not giving rulings on points of order raised.

Sri V. S. PATIL.—Let us take this point of order after Question Hour.

Mr. SPEAKER.—I must rule it then and there.

Sri C. J. MUCKANNAPPA.—It is complicated point. You may reserve your ruling.

Mr. SPEAKER.—There is no complication in my mind.

ಶ್ರೀ ಬಿ. ಜೆ. ಲಿಂಗೇಗೌಡ—ಸ್ವಾಮಿ, ಜಿಲ್ಲಾಧಿಕಾರಿಗಳು ಸಾಲದ ಅರ್ಜಿಗಳನ್ನು ಕಳುಹಿಸದೆ ಹೆಸರುಗಳ ಪಟ್ಟಿಯನ್ನು ಮಾತ್ರ ಕಳುಹಿಸುವುದರಿಂದ ಅರ್ಜಿಗಳ ಮಂಜೂರಾತಿ ತಡವಾಗುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಅರ್ಜಿಗಳನ್ನು ಕಳುಹಿಸಿದರೂ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನಲ್ಲಿ ಕೆಲವು ಕಾಲ ಹಿಡಿದೇ ಹಿಡಿಯುತ್ತದೆ. ಹೆಸರುಗಳನ್ನು ಕಳಿಸಿದರೂ ತಡವಾಗುತ್ತದೆ. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನವರು ಕ್ರಮವನ್ನು ಅನುಸರಿಸಿ ಅಬ್ಜೆಕ್ಷನ್ ತರಿಸಿ ಅದರ ಮೇಲೆ ಲೋನ್ ಕೊಡಬೇಕಾಗುತ್ತದೆ. ಡೆಪ್ಯೂಟಿ ಕಮೀಷನರು ಬರೀ ಹೆಸರು ಕಳುಹಿಸುವುದರಿಂದ ಅಷ್ಟು ಏನೂ ತಡವಾಗುತ್ತಾ ಇಲ್ಲ.

Sri N. O. SAMAJI.—(*Marathi*)

Sri V. S. PATIL.—Whenever any application is made to the Bank, Sri Samaji says that the Bank charges 12 annas for the application and then Rs. 18 per thousand for inspection of the property, etc. But in case the application is rejected these Rs. 18 are not returned at all. He asks why the applicant should suffer ?

Sri K. PUTTASWAMY.—The information that the Hon'ble Member supplying is definitely wrong. Rs. 18 per thousand is not at all collected.

Sri N. O. SAMAJI.—(*Marathi*)

Mr. SPEAKER.—Please put it in writing. I will get an explanation.

ಶ್ರೀ ಆಂದಾನಯ್ಯ.—ಜಮೀನು ಅಭಿವೃದ್ಧಿಯ ಬ್ಯಾಂಕಿನವರು ಸಾಲವನ್ನು ಇತ್ಯರ್ಥ ಮಾಡುವಾಗ, ಶಾಸನ ಸಭಾ ಸದಸ್ಯರು ತಾಲ್ಲೂಕು ಬೋರ್ಡ್ ಪ್ರೆಸಿಡೆಂಟರು ಮತ್ತು ಬ್ಲಾಕ್ ಡೆವಲಪ್‌ಮೆಂಟ್ ಆಫೀಸರು, ಈ ಮೂರು ಜನ ಕಮಿಟಿಯಲ್ಲಿ ಸದಸ್ಯರು ಆಗಿರಬೇಕು ಎಂದು ಸರ್ಕಾರದಿಂದ ಆದೇಶ ಏನಾದರೂ ಹೋಗಿದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಇಲ್ಲ.

Sri N. O. SAMAJI.—(*Marathi*)

ಶ್ರೀ ಕೆ. ಪುಟ್ಟಸ್ವಾಮಿ. ಈಗ ಸಂಸ್ಥಾನಾದ್ಯಂತ 40೧0 ಬಾವಿಗಳಿಗೆ ಹಣ ಕೊಡಬೇಕು ಎಂದು ತೀರ್ಮಾನವಾಗಿದೆ. ಅದು ಜಿಲ್ಲಾವಾರು ಹಂಚಿಕೆಯಾಗಿದೆ. ಡೆಪ್ಯೂಟಿ ಕಮೀಷನರ್ ಪುನಃ ತಾಲ್ಲೂಕವಾರು ಹಂಚಿಕೆ ಮಾಡಿದ್ದಾರೆ. ಬಹುಶಃ ಮಾನ್ಯ ಸದಸ್ಯರು ಉದ್ದೇಶ ಪಟ್ಟಿರತಕ್ಕ ತಾಲ್ಲೂಕಿನಲ್ಲಿ 25 ಬಾವಿಗಳಿಗೆ ಅವಕಾಶ ಮಾಡಿಕೊಟ್ಟಿರಬಹುದು.

ಶ್ರೀ ಹೆಚ್. ಆರ್. ಕೇಶವಮೂರ್ತಿ.—ಬಾವಿಗೆ ಹಣ ಕೊಡಬೇಕಾದುದಕ್ಕೆ ಕೇವಲ 3 ಪರ್ಸೆಂಟು ಬಡ್ಡಿ ಹಾಕಿದ್ದಾರೆ ಹೀಗೆ 3 ಪರ್ಸೆಂಟು ಬಡ್ಡಿ ಹಾಕಿರುವುದರಿಂದ, ಒಂದೊಂದು ಬ್ಯಾಂಕಿನಲ್ಲಿ ಪ್ರಭಾವಶಾಲಿಗಳಾದ ವ್ಯಕ್ತಿಗಳಿಗೆ ಕೇವಲ ಸಾಲ ದೊರೆಯುತ್ತದೆ ಸಾಮಾನ್ಯ ವ್ಯಕ್ತಿಗಳಿಗೆ ದೊರೆಯುತ್ತಿಲ್ಲ. 9 ಪರ್ಸೆಂಟು ಕೊಡಬೇಕಾದರೂ ಬಾವಿ ತೋಡುವುದಕ್ಕೆ ತಯಾರು ಆಗಿದ್ದಾರೆ. ಆದ್ದರಿಂದ ಏನಾದರೂ ಮಾಡಿ ಮುಂದಿನ ತೀರ್ಮಾನ ಮಾಡುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು ಬರೇ ಪ್ರಭಾವಶಾಲಿಗಳಿಗೆ ಮಾತ್ರ ಹಣ ದೊರೆಯುತ್ತಾ ಇದೆ ಎಂದು ಹೇಳುವುದು ಅವರ ಊಹೆ. ಅದು ನಿಜವಾದುದಲ್ಲ. ಶೇಕಡ 3 ಪರ್ಸೆಂಟು ಬಡ್ಡಿ ಮೇರೆ ಕೊಡುತ್ತಾ ಇರುವುದು ರೈತನಿಗೆ ಅನುಕೂಲವಾಗಲಿ, ರೈತ ವಾಪಸ್ಸು ಕೊಡುವುದಕ್ಕೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಇಪ್ಪತ್ತೊಂದು ಕಡಿಮೆ ದರದ ಬಡ್ಡಿಯಲ್ಲಿ ಹಣ ಒದಗಿಸಿಕೊಡುತ್ತಾ ಇರುವುದು. ಸರ್ಕಾರ ಬಡ್ಡಿಗೆ ಸಬ್‌ಸಿಡೈಸ್ ಮಾಡಬೇಕಾಗುತ್ತದೆ. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿಗೆ 5-6 ಪರ್ಸೆಂಟುವರೆಗೆ ಬಡ್ಡಿ ಹೆಚ್ಚಿಗೆ ಕೊಡಬೇಕಾಗುತ್ತದೆ. ಮಾನ್ಯ ಸದಸ್ಯರು ಊಹೆ ಮಾಡುವುದು ಸರಿಯಾದುದಲ್ಲ. ಹೆಚ್ಚಿಗೆ ಬಡ್ಡಿ ಕೊಡುತ್ತೇವೆ ಎಂದು ಹೇಳಿದರೆ ಹೆಚ್ಚಿಗೆ ಹಣ ಬರುವುದಿಲ್ಲ. ಇರತಕ್ಕ ಹಣ ಆಸ್ಪೇ. 3 ರಿಂದ 9 ಪರ್ಸೆಂಟು ಬಡ್ಡಿ ಕೊಟ್ಟರೂ ಹಣ ಮಾತ್ರ ಹೆಚ್ಚುವುದಿಲ್ಲ.

ಶ್ರೀ ಬಿ. ಬೈರಪ್ಪಾಜಿ.—ಚನ್ನಪಟ್ಟಣದ ಅಭಿವೃದ್ಧಿ ಬ್ಯಾಂಕಿಗೆ 30 ಬಾವಿಗಳಿಗೆ 1 ಲಕ್ಷ 50 ಸಾವಿರ ರೂಪಾಯಿ ಮಂಜೂರು ಮಾಡುತ್ತೀರಿ. ಕೆಲವು ಬಾವಿಗಳಿಗೆ 3 ಸಾವಿರ, 4 ಸಾವಿರ, ಕೆಲವಕ್ಕೆ 5 ಸಾವಿರ ಸಿಕ್ಕುತ್ತದೆ. ಇದರಲ್ಲಿ ಬಾವಿಗಳನ್ನು ಹೆಚ್ಚಿಗೆ ಮಾಡುವುದಕ್ಕೆ ಅವಕಾಶವಿದೆ. ಅಭಿವೃದ್ಧಿ ಬ್ಯಾಂಕಿನವರು 30 ಬಾವಿಗಳಿಗೆ ಕೊಡುತ್ತೇವೆ ಎಂದು ಹೇಳುವುದರಿಂದ ಹಣ ಉಳಿಯುತ್ತದೆ. ಅದ್ದರಿಂದ ಬಾವಿಗಳನ್ನು ಜಾಸ್ತಿ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕಾದುದು ಸರ್ಕಾರದ ಕರ್ತವ್ಯ ಅಲ್ಲವೇ ?

ಶ್ರೀ ಕೆ. ಪುಟ್ಟಸ್ವಾಮಿ.—ಆಯಾಯ ತಾಲ್ಲೂಕಿಗೆ ಮಂಜೂರು ಆಗಿರತಕ್ಕ ಹಣದ ಮೊತ್ತಕ್ಕೆ ಎಷ್ಟು ಹೆಚ್ಚಿನ ಸಂಖ್ಯೆದುಲ್ಲ ಸಂಪೂರ್ಣವಾಗಿ ಬಾವಿ ತೆಗೆಯುವುದಕ್ಕೆ ಅವಕಾಶವಿವೆಯೋ ಅಷ್ಟು ಸಂಖ್ಯೆಗೂ ಕೊಡಬೇಕು ಎಂದು ತಿಳುವಳಿಕೆ ಕೊಡುತ್ತಾ ಇದ್ದೇವೆ. ಆದರೆ ಅರ್ಧ, ಅರ್ಧ ಮಾಡಿ ನಿಲ್ಲಿಸುವುದಕ್ಕೆ ಅವಕಾಶ ಇಲ್ಲ. ಯಾರಿಗೆ ಸಾಲ ಕೊಟ್ಟರೂ ಕೂಡ, ಆತನ ಬಾವಿ ಸಂಪೂರ್ಣ ಆಗುವಷ್ಟು ಹಣ ಒದಗಿಸಿಕೊಡಬೇಕು. ಆಗ ಒಂದು ಆಧಾರದ ಮೇಲೆ ಹೆಚ್ಚಿನ ಸಂಖ್ಯೆಯಲ್ಲಿ ಬಾವಿ ಕೊಡುವುದಕ್ಕೆ ಅಡ್ಡಿ ಇಲ್ಲ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಸ್ವಾಮಿ, ಎಲ್ಲರಾವರಿ ಬಾವಿಗಳಿಗಾಗಿ ಅರ್ಜಿಗಳು ಬಂದರೆ ಅವುಗಳನ್ನು ಎಷ್ಟು ತಿಂಗಳಲ್ಲಿ ಇತ್ಯರ್ಥ ಮಾಡುತ್ತೀರಿ ? ಎರಡು ತಿಂಗಳಲ್ಲಿ ಎಷ್ಟು ಅರ್ಜಿಗಳು ಬಂದಿವೆ, ಅವುಗಳನ್ನು ಎಷ್ಟು ಸಮಯದೊಳಗೆ ಇತ್ಯರ್ಥ ಮಾಡುತ್ತೀರಿ ?

ಶ್ರೀ ಕೆ. ಪುಟ್ಟಸ್ವಾಮಿ.—ಎರಡು ತಿಂಗಳೊಳಗೆ ಮಾಡುತ್ತೇವೆ ಎಂದು ಹೇಳುವುದಕ್ಕಾಗುವುದಿಲ್ಲ. ಒಂದು ಹೊಸ ಅರ್ಜಿ ಬಂದ ಮೇಲೆ ಸಾಧಾರಣವಾಗಿ 3 ತಿಂಗಳೊಳಗೆ ಅರ್ಜಿದಾರನಿಗೆ ಹಣ ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ಆದರಲ್ಲಿ ತಕರಾರು ಏನಾದರೂ ಇದ್ದರೆ ಸ್ವಲ್ಪ ವಿಧಾನವಾಗುತ್ತದೆ.

ಶ್ರೀ ಕೆ. ಎಸ್. ನೂರ್ಯನಾರಾಯಣರಾವ್.—ಸ್ವಾಮಿ, ತಾವು ಯಾವರಗಳನ್ನು ಕೊಡುತ್ತೇವೆ ಎಂದು ಹೇಳಿದ್ದೀರಿ.

> "M.L.A., Chairman of the T. D. B. and Block Development Officer should informally discuss about the servicing of the loan as also the location of the well."

ಈ ರೀತಿ ಚನ್ನಪಟ್ಟಣದಲ್ಲಿ ಕೆಲಸ ನಡೆದಿದೆಯೇ, ಸ್ವಾಮಿ ?

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಆದು ಎಂ. ಎಲ್. ಎ. ತಾಲ್ಲೂಕ್ ಬೋರ್ಡ್ ಚೇರ್ಮನ್ ಇವರ ಹತ್ತಿರ ಎಲ್ಲಾ ಆಯಾ ತಾಲ್ಲೂಕಿಗೆ ಆಗತಕ್ಕಂತಹ ಟಾರ್ಜೆಟ್ ಮಾಡಿಕೊಡಿ ಎಂದು ಹೇಳಿದ್ದೇವೆ. ಅದರ ಪ್ರಕಾರ ಮಾಡಿದ್ದೇವೆ.

Sri K. S. SURYANARAYANA RAO.—I will read from the Government order it says :

> "as regards the distribution of the loan and location of the new wells, it has been decided that the local M. L. A., the Chairman of the TDB, and the Block Development Officer should informally consult in the distribution of the loan as well as the location of the new wells."

My question is : Are such things being done ?

Sri K. PUTTASWAMY.—Such things are being done. When they take up applications for consideration, all these formalities will have been observed.

Sri B. J. LINGE GOWDA.—Has it been done in the case of Channapatna taluk, Sir ?

Sri K PUTTASWAMY.—I do not know about Channapatna, Sir. The Hon'ble Member must be aware of it.